ಶ್ರೀ ಕೆ.ಹೆಚ್. ರಂಗನಾಥ್ : ಆದುದರಿಂದಲೇ ನಾನು ಹೇಳಿದ್ದುದು ಪ್ರಶ್ನೆ ಹೇಗೆ ಕೊಟ್ಟಿದ್ದಾರೆ ಎಂದು ಹೇಳಿ ನಮ್ಮ ಇಲಾಖೆಯಿಂದ ಪರಿಶೀಲನೆ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ತಮ್ಮ ಲೆಜಿಸಲೆಟರ್ ಸೆಕ್ರೆಟರಿಯೇಟ್‌ನ ಮೂಲ ಪ್ರಶ್ನೆಯನ್ನು ತಾವು ತರಿಸಿ ಕೊಡಬೇಕು. ತರಿಸಿಕೊಡಬೇಕಾದರೆ ತರಿಸಿ ಕೊಡುತ್ತೇವೆ. ಇದರಲ್ಲಿ ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ಉತ್ತರ ಇದೆ. ಅವರು ಕ್ಷೇತ್ರವಾರು ಕೇಳಿದರೆ ಕ್ಷೇತ್ರವಾರು ಕೊಡುತ್ತೇನೆ.

ಉಪಾಧ್ಯಕ್ಷಣೀಯವರು : ಅವರಿಗೆ ಕ್ಷೇತ್ರವಾರು ವಿವರ ಬೇಕಂತೆ, ಆದ್ದರಿಂದ ಈ ಪ್ರಶ್ನೆಯನ್ನು ವಿಥೋಲ್ಡ್ ಮಾಡಿ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ.

ಟ್ರೈಸಂ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಫಲಾನುಭವಿಗಳ ಸಂಖ್ಯೆ.

1011 - ಶ್ರೀ ಬಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಟ್ರೈಸಂ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಪರಿಷತ್, ಈ ಸಾಲಿನಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಲಾಗಿರುವುದು (ತಾಲ್ಲೂಕುವಾರು ವಿವರಗಳನ್ನು ವ್ಯಕ್ತಿಗತ ಮಾಹಿತಿಯೊಂದಿಗೆ ನೀಡುವುದು) ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲಾಪರಿಷತ್, 727 ಗ್ರಾಮೀಣ ಯುವಕರನ್ನು ಟ್ರೈಸಂ ಯೋಜನೆಯಡಿ ತರಬೇತಿ ಹೊಂದಲು ಫಲಾನುಭವಿಗಳಾಗಿ ಗುರುತಿಸಿ ಈ ಸಾಲಿನಲ್ಲಿ (1992-93) ಆಯ್ಕೆ ಮಾಡಲಾಗಿದೆ.

ಟ್ರೈಸಂ ಯೋಜನೆಯಡಿ ಆಯ್ಕೆ ಆಗಿರುವ ಫಲಾನುಭವಿಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

ಪೋಷ್ಟಾರೆ

ಕ್ರ ಸಂ	ತಾಲ್ಲೂಕು ಹೆಸರು	ತರಬೇತಿಗೆ ಆಯ್ಕೆ ಆಗಿರುವ ಅಭ್ಯರ್ಥಿಗಳ ಸಂಖ್ಯೆ
1.	ಕುಂದಾಪುರ	81
2.	ಉಡುಪಿ	87
3.	ಕಾರ್ಕಳ	98
4.	ಬಂಟವಾಳ	132
5.	ಮಂಗಳೂರು	80
6.	ಪುತ್ತೂರು	80
7.	ಬೆಳತಂಗಡಿ	98
8.	ಸೂಳ್ಯ	71
	ಒಟ್ಟು	727

ಶ್ರೀ ಪಿ. ಬಸವರಾಜು : ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ಯುವಕರಿಗೆ ಟ್ರೈಸಂ ಯೋಜನೆಯಲ್ಲಿ ಸುಮಾರು 727 ಜನ ಫಲಾನುಭವಿಗಳನ್ನು ಗುರುತಿಸಿದ್ದೆವೆಂದು ಉತ್ತರ ಕೊಟ್ಟಿದ್ದಾರೆ. ಆ ಫಲಾನುಭವಿಗಳಿಗೆ ಯಾವ ಯಾವ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆಂದು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಟ್ರೈಸಂ ಟ್ರೈನಿಂಗ್ ಪ್ರೋಗ್ರಾಂಗೆ ಸಂಬಂಧಪಟ್ಟಿದ್ದುದು. ಟ್ರೈನಿಂಗ್‌ನ್ನೂ ಬೇರೆ ಬೇರೆ ರೀತಿಯಲ್ಲಿ ಕೊಡುತ್ತಿದ್ದಾರೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜನರಿಗೆ ಟ್ರೈಸಂ ಪ್ರಕಾರ ಟ್ರೈನಿಂಗ್ ಕೊಡಲು ಸಾಧ್ಯವಾಗಿದೆ ಎಂಬ ವಿವರಗಳನ್ನೂ ಕೊಟ್ಟಿದ್ದೇನೆ. ಅದರ ಉದ್ದೇಶ ಏನೆಂದರೆ ಅವರನ್ನು ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡಬೇಕೆಂಬುದು. ಅದು ನೌಕರಿಗೆ ಸೇರುವುದಕ್ಕೆ ಇರಬಹುದು ಅಥವಾ ಸ್ವಂತ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಇರಬಹುದು. ಒಟ್ಟಿನಲ್ಲಿ ಅವರಿಗೆ ಉದ್ಯೋಗಕ್ಕೆ ಸೇರುವ ಅರ್ಹತೆ ಬರಲಿ ಎಂಬುದೆ ಈ ಟ್ರೈಸಂ ಪ್ರೋಗ್ರಾಂನ ಉದ್ದೇಶವಾಗಿದೆ. ಮತ್ತು ಐ.ಆರ್.ಡಿ.ಪಿ.ಗೂ ಈ ಟ್ರೈಸಂ ಪ್ರೋಗ್ರಾಂಗೂ ಒಂದು ಸಂಬಂಧ ಇದೆ. ಇವರು ಎಲ್ಲಾದರೂ ಸಾಲವನ್ನು ತೆಗೆದುಕೊಂಡು ಸ್ವಂತ ಉದ್ಯೋಗವನ್ನು ಮಾಡಿಕೊಳ್ಳಲಿ ಎಂಬುದು ಇದರ ಉದ್ದೇಶ.

ಶ್ರೀ ಪಿ. ಬಸವರಾಜ್ : ತಾವು ಫಲಾನುಭವಿಗಳನ್ನು ಯಾವರೀತಿ ಆಯ್ಕೆ ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಅದು ಪ್ರೊಸಿಜರ್ ಪ್ರಕಾರ ಯಾರ್ಯಾರು ಅರ್ಜಿ ಹಾಕಿರುತ್ತಾರೆ ಅವರನ್ನು, ತಾಲ್ಲೂಕು ಮಟ್ಟದಲ್ಲಿ ಸೆಲೆಕ್ಟ್ ಮಾಡುವ ಒಂದು ಕ್ರಮ ಇದೆ. ಅದರ ಪ್ರಕಾರ ಸೆಲೆಕ್ಟ್ ಮಾಡಿ ಬೇರೆ ಬೇರೆ ಕ್ರಾಪ್ಟ್ ಟ್ರೈನಿಂಗ್ ಪ್ರೊಗ್ರಾಂಗೆ ಹಾಕುತ್ತಾರೆ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರತಕ್ಕಂತಹ ವಿಷಯ.

ಮುಂಡರಗಿ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧದ ನಿರ್ಮಾಣ

630 -ಶ್ರೀ ಕೆ.ಹೆಚ್. ಕುರಡಿಗಿ (ಮುಂಡರಗಿ) : ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮುಂಡರಗಿ ತಾಲ್ಲೂಕು ಕಛೇರಿಯು ಪೂರ್ಣ ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಮಿನಿ ವಿಧಾನಸೌಧ, ಕಟ್ಟುವ ವಿಚಾರವು ಸರ್ಕಾರದ ಮುಂದಿದಯೇ?*

ಇ) *ಹಾಗಿದ್ದಲ್ಲೀ, ಯಾವಾಗ ಕಟ್ಟಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ಈ ಪ್ರಸ್ತಾವನೆಯನ್ನು 1993-94ರ ಸಾಲಿನಲ್ಲಿ ಆಯವ್ಯಯದಲ್ಲಿ ಸೇರಿಸುವ ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಕೆ.ಹೆಚ್. ಕುರುಡಗಿ : ತಾವು ಮೊದಲನೆಯ ಉತ್ತರದಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಎರಡನೆಯದರಲ್ಲಿ ಇನ್ನು 93-94ರಲ್ಲಿ